# *57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಮೆಯೋಹಾಲ್ ಘಟಕ, ಬೆಂಗಳೂರು (58ನೇ ನಗರ ಸಿವಿಲ್ ನ್ಯಾಯಾಂಗಣ)*

ದಿನಾಂಕಃ 29 ನೇ ಮಾಹೆ ಜನವರಿ 2021

*-ಃ ಉಪಸ್ಥಿತರು ಃ-*

ಶ್ರೀಮತಿ ಕೆ. ಜಿ. ಶಾಂತಿ ಬಿ.ಕಾಮ್ ಎಲ್‌ಎಲ್.ಎಂ.,
57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್ ಘಟಕ, ಬೆಂಗಳೂರು.

## ***ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ 25099/2021***

ಅರ್ಜಿದಾರ/
(ಆರೋಪಿತ) **ಎನ್. ರಾಮಕೃಷ್ಣ ಬಿನ್ಃ ಕೆ.ವಿ.ನಾಗಪ್ಪ,**
ವಯಸ್ಸು ಸುಮಾರು 65 ವರ್ಷ,
ವಾಸಃ ನಂ.428, ನಾಗ ಫ್ಲೋರ್ ಮಿಲ್,
ಟೆಂಪಲ್ ಸ್ಟ್ರೀಟ್, ಬಂಗಾರಪೇಟೆ-563114.

(ಪರವಾಗಿ ಶ್ರೀ ಲೆಕ್ಸ್ ನೂರೇನ್ ವಕೀಲರು)

- ವಿರುದ್ಧ -

ಎದುರುದಾರರುಃ ರಾಜ್ಯದ ಪರವಾಗಿ ಬಾಣಸವಾಡಿ ಪೊಲೀಸ್ ಠಾಣೆ,
ಬೆಂಗಳೂರು ನಗರ.

(ಪರವಾಗಿ ಸರ್ಕಾರಿ ಅಭಿಯೋಜಕರು)

*****

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ

ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅರ್ಜಿದಾರನು ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಸಲ್ಲಿಸಿ, ಬೆಂಗಳೂರು, ಮೆಯೋಹಾಲ್ ಘಟಕದ 11ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯದಲ್ಲಿ ತನ್ನ ವಿರುದ್ಧ ಬಾಣಸವಾಡಿ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 04/2019 ರಲ್ಲಿ ಭಾರತ ದಂಡ ಸಂಹಿತೆ ಕಲಂ 419, 420, 467, 468, 504, 506(ಬಿ) ಮತ್ತು 120(ಬಿ) ರಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿದ್ದಾನೆ.

2. ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ:-

ಪಿರ್ಯಾದಿದಾರರು ಮತ್ತು ಆತನ ಪತ್ನಿ ಶ್ರೀಮತಿ ಯಾಮಿನಿರವರು ಹೆಚ್.ಆರ್.ಬಿ.ಆರ್ ಲೇಔಟ್‌ನ 1ನೇ ಬ್ಲಾಕ್‌ನ ಸೈಟ್ ನಂಬರ್ 10, ಎಮ್-265 ರ ನಿವೇಶನವನ್ನು ಖರೀದಿಸಿದ್ದು, ಆ ಸೈಟ್ ಬಿ.ಡಿ.ಎಗೆ ಸೇರಿದ್ದು, 1ನೇ ಆರೋಪಿ ಗೌರಮ್ಮ ಹಾಗೂ ಮತ್ತಿತರರು ಸೇರಿ ತನ್ನ ಪತ್ನಿ ಯಾಮಿನಿರವರಿಗೆ ರೀಲಿಸ್ ಡೀಡ್ ಅನ್ನು ದಿನಾಂಕ 25-07-2018 ರಂದು ಮಾಡಿದ ಹಾಗೇ ಸುಳ್ಳು ದಾಖಲೆಯನ್ನು ಸೃಷ್ಟಿಸಿ, ನಂತರ ಆಕೆ ಭತ್ತೇಶ್ ಎಂಬುವವರಿಗೆ ಸೇಲ್ ಅಗ್ರಿಮೆಂಟ್ ಮಾಡಿದ್ದು, ಈ ಬಗ್ಗೆ ಕೇಳಲಾಗಿ 1ನೇ ಆರೋಪಿ ಉಳಿದ ಆರೋಪಿತರೊಂದಿಗೆ ಸೇರಿಕೊಂಡು ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಹಾಗೂ ಆರೋಪಿತರು ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಕಲಿ ವ್ಯಕ್ತಿ

ಮತ್ತು ಮಹಿಳೆಯನ್ನು ಸೃಷ್ಟಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ತನಗೆ ಮೋಸ ಮಾಡಲು ಬೇರೆಯವರಿಗೆ ಸೇಲ್ ಅಗ್ರಿಮೆಂಟ್‌ನ್ನು ಮಾಡಿರುತ್ತಾರೆ ಎನ್ನುವುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ. ಅರ್ಜಿದಾರನು ಅಮಾಯಕನಿದ್ದು ಆರೋಪಿಸಿದಂತಹ ಯಾವುದೇ ಅಪರಾಧಗಳನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ಆರೋಪಿಸಿದಂತಹ ಅಪರಾಧಗಳ್ಯಾವುವೂ ಕಡ್ಡಾಯವಾಗಿ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಲ್ಲವೆಂದೂ ಆರೋಪಿತ ನಂ.6 ಶಾಂತಕುಮಾರ್ ರವರು ದಿನಾಂಕ 07/01/2021 ರಂದು ಪೋಲೀಸಿನವರ ಮುಂದೆ ತನಿಖೆಯ ಸಮಯದಲ್ಲಿ ಅರ್ಜಿದಾರನ ಹೆಸರನ್ನು ಹೇಳಿದ್ದು, ಅರ್ಜಿದಾರನನ್ನು ಪೋಲೀಸಿನವರು ದಸ್ತಗಿರಿ ಮಾಡುವ ಸಾಧ್ಯತೆ ಇದೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಿದ್ದಾನೆ.

3. ಪ್ರಕರಣದಲ್ಲಿ ಹೇಳಲಾದ ಅಪರಾಧವು ಕೆಳ ನ್ಯಾಯಾಲಯದಲ್ಲಿ ವಿಚಾರಣೆಯಾಗುವಂತಹ ಅಪರಾಧಗಳಾಗಿರುತ್ತವೆ ಎಂದೂ, ತನ್ನ ವಿರುದ್ಧ ಯಾವುದೇ ಆಪಾದನೆಗಳು ಕಂಡು ಬರುತ್ತಿಲ್ಲವೆಂದೂ, ತಾನು ಗೌರವಾನ್ವಿತ ಕುಟುಂಬದಿಂದ ಬಂದಿದ್ದು, ಸಮಾಜದಲ್ಲಿ ಒಳ್ಳೆಯ ಸ್ಥಾನಮಾನವನ್ನು ಹೊಂದಿದ್ದು, ತಲೆ ಮರೆಸಿಕೊಳ್ಳುವ ಅಥವಾ ವಿಚಾರಣೆಯನ್ನು ಮುಂದೂಡುವ ಪ್ರಯತ್ನ ಮಾಡುವುದಿಲ್ಲವೆಂದೂ, ಪೊಲೀಸರು ತನ್ನನ್ನು ದಸ್ತಗಿರಿ ಮಾಡಿದಲ್ಲಿ ತನಗೆ ತುಂಬಲಾರದ ತೊಂದರೆ ಉಂಟಾಗುತ್ತದೆ ಎಂದೂ, ತಪ್ಪದೇ ನ್ಯಾಯಾಲಯಕ್ಕೆ

ಹಾಜರಾಗಲು, ತನಿಖೆಗೆ ಸಹಕರಿಸಲು ಹಾಗೂ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನುದಾರನನ್ನು ನೀಡಲು ಸಿದ್ದನಿದ್ದೇನೆಂದೂ, ತನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿದ್ದಾನೆ.

4. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ, ಆರೋಪಿತನು ಇತರೆ ಆರೋಪಿತರೊಂದಿಗೆ ಸೇರಿಕೊಂಡು ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಕಲಿ ವ್ಯಕ್ತಿ ಮತ್ತು ಮಹಿಳೆಯನ್ನು ಸೃಷ್ಟಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಪಿರ್ಯಾದಿದಾರರಿಗೆ ಮೋಸ ಮಾಡಿದ್ದು ಅಲ್ಲದೇ, ಪ್ರಕರಣವು ತನಿಖಾ ಹಂತದಲ್ಲಿದ್ದು, ಅರ್ಜಿದಾರನು ಕೃತ್ಯ ನಡೆದಾಗಿನಿಂದಲೂ ತನಿಖೆಗೆ ಲಭ್ಯವಿಲ್ಲದೇ ಪರಾರಿಯಲ್ಲಿದ್ದು, ಅವನಿಗೆ ಜಾಮೀನು ನೀಡಿದರೆ ನ್ಯಾಯಾಲಯದ ವಿಚಾರಣೆಗೆ ಗೈರು ಹಾಜರಾಗಿ ವಿಚಾರಣೆ ಕುಂಠಿತ ವಾಗುವ, ಸಾಕ್ಷಿದಾರರಿಗೆ ಬೆದರಿಕೆ ಹಾಕಿ ಸಾಕ್ಷ್ಯಗಳನ್ನು ನಾಶಪಡಿಸುವ ಸಾಧ್ಯತೆಗಳಿವೆ ಎಂದು ಹೇಳಿ, ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿದ್ದಾರೆ.

5. ಕಡತವನ್ನು ಪರಿಶೀಲಿಸಲಾಯಿತು ಹಾಗೂ ವಾದ ವಿವಾದವನ್ನು ಆಲಿಸಲಾಯಿತು.

6. ಈ ಹಂತದಲ್ಲಿ ನನ್ನ ತೀರ್ಮಾನಕ್ಕೆ ಉದ್ಭವಿಸುವ ಅಂಶಗಳೇನೆಂದರೇಃ-

1) ಅರ್ಜಿದಾರನು ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆಯಲು ಅರ್ಹನಿದ್ದಾನೆಯೇ?

2) ಏನು ಆದೇಶ?

7. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

ಅಂಶ ಒಂದುಃ ಸಕಾರಾತ್ಮಕವಾಗಿ,

ಅಂಶ ಎರಡುಃ ಅಂತಿಮ ಆದೇಶದಂತೆ, ಈ ಕೆಳಕಂಡಂತೆಃ

## ***ಕಾ ರ ಣ ಗ ಳುಃ***

**8. ಅಂಶ (1)ಃ** ಪಿರ್ಯಾದಿದಾರರು ಮತ್ತು ಆತನ ಪತ್ನಿ ಶ್ರೀಮತಿ ಯಾಮಿನಿರವರು ನಿವೇಶನವನ್ನು ಖರೀದಿಸಿದ್ದು, ಆ ಸೈಟ್ ಬಿ.ಡಿ.ಎಗೆ ಸೇರಿದ್ದು, 1ನೇ ಆರೋಪಿ ಗೌರಮ್ಮ ಹಾಗೂ ಮತ್ತಿತರರು ಸೇರಿ ತನ್ನ ಪತ್ನಿ ಯಾಮಿನಿರವರಿಗೆ ರೀಲಿಸ್ ಡೀಡ್ ಅನ್ನು ದಿನಾಂಕ 25-07-2018 ರಂದು ಮಾಡಿದ ಹಾಗೇ ಸುಳ್ಳು ದಾಖಲೆಯನ್ನು ಸೃಷ್ಟಿಸಿ, ನಂತರ ಆಕೆ ಭತ್ತೇಶ್ ಎಂಬುವವರಿಗೆ ಸೇಲ್ ಅಗ್ರಿಮೆಂಟ್ ಮಾಡಿದ್ದು, ಈ ಬಗ್ಗೆ ಕೇಳಲಾಗಿ ಆರೋಪಿಗಳೆಲ್ಲರೂ ಸೇರಿಕೊಂಡು ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಹಾಗೂ ಆರೋಪಿತರು ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಕಲಿ ವ್ಯಕ್ತಿ ಮತ್ತು ಮಹಿಳೆಯನ್ನು ಸೃಷ್ಟಿಸಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ತನಗೆ ಮೋಸ ಮಾಡಲು ಬೇರೆಯವರಿಗೆ ಸೇಲ್ ಅಗ್ರಿಮೆಂಟ್‌ನ್ನು ಮಾಡಿರುತ್ತಾರೆ ಎನ್ನುವುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ. ತದನಂತರ ದಿನಾಂಕ 07/01/2021 ರಂದು

ಪೋಲಿಸಿನವರು ಶಾಂತಕುಮಾರ್ ರವರನ್ನು ತನಿಖೆ ಮಾಡುವಾಗ, ಆ ಸಮಯದಲ್ಲಿ ಅರ್ಜಿದಾರನ ಹೆಸರನ್ನು ಹೇಳಿದ್ದು, ಅರ್ಜಿದಾರನನ್ನು ಪೋಲೀಸಿನವರು ದಸ್ತಗಿರಿ ಮಾಡುವ ಸಾಧ್ಯತೆ ಇದೆ ಎಂದು ಹೇಳುತ್ತಾನೆ.

9. ಅರ್ಜಿದಾರನು ಪಿರ್ಯಾದಿದಾರರನ್ನು ಯಾವುದೇ ರೀತಿಯಲ್ಲಿ ವಂಚಿಸಿರುವುದಿಲ್ಲವೆಂದೂ, ಆದ್ದರಿಂದ ಅರ್ಜಿದಾರನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದೂ ವಾದಿಸಿದ್ದಾರೆ. ಸರ್ಕಾರಿ ಅಭಿಯೋಜಕರು ಅರ್ಜಿದಾರನನ್ನು ಜಾಮೀನಿನ ಮೇಲೆ ಬಿಟ್ಟಲ್ಲಿ ಆತ ಸಾಕ್ಷಿದಾರರಿಗೆ ಬೆದರಿಕೆ ಹಾಕಿ, ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಸಾಧ್ಯತೆಗಳಿರುವ ಕಾರಣ, ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಾರದು ಎಂದೂ ಸರ್ಕಾರಿ ಅಭಿಯೋಜಕರು ವಾದಿಸಿದ್ದಾರೆ.

10. ಪಿರ್ಯಾದಿದಾರರು 11ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯದಲ್ಲಿ ಸಲ್ಲಿಸಿದ ಖಾಸಗಿ ದೂರಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿದ್ದು, ಸದರಿ ದೂರನ್ನು ಗಮನಿಸಿದಾಗ ಅರ್ಜಿದಾರನು ಪಿರ್ಯಾದಿ ಹಾಗೂ ಆತನ ಹೆಂಡತಿಗೆ ಸೇರಿದ ಸೈಟನ್ನು 2ನೇ ಆರೋಪಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿರುತ್ತಾರೆಂದು ಆಪಾದಿಸಿರುವುದು ವ್ಯಕ್ತವಾಗುತ್ತಿದ್ದು, ಆದರೆ ಯಾವ ರೀತಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಪಿರ್ಯಾದಿದಾರರನ್ನು ವಂಚಿಸಿರುತ್ತಾರೆ ಎಂಬ ಬಗ್ಗೆ ಯಾವುದೇ ಮಾಹಿತಿ ವ್ಯಕ್ತವಾಗುತ್ತಿಲ್ಲ.

ಅರ್ಜಿದಾರನು ಈ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಎಂಬ ಅಂಶಗಳು ಕೇವಲ ಸಾಕ್ಷ್ಯಾಧಾರಗಳಿಂದಲೇ ರುಜುವಾತಾಗತಕ್ಕಂತಹ ಸಂಗತಿಗಳಾಗಿವೆ.

11. ಪಿರ್ಯಾದಿದಾರರು ದೂರಿನಲ್ಲಿ ಹೇಳಿರುವ ಅಪರಾಧಗಳನ್ನು ಅರ್ಜಿದಾರನು ಎಸಗಿದ್ದಾನೆ ಎಂದು ಮೇಲ್ನೋಟಕ್ಕೆ ನಿರ್ಧರಿಸುವಂತಹ ಯಾವುದೇ ಪ್ರಬಲ ಮಾಹಿತಿಯನ್ನು ಅಭಿಯೋಜನೆಯು ಒದಗಿಸಿರುವುದಿಲ್ಲ. ಮೇಲ್ನೋಟಕ್ಕೆ ಇದೊಂದು ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತಹ ಪ್ರಕರಣವಾಗಿದ್ದು, ಆರೋಪಿಸಿದಂತಹ ಅಪರಾಧಗಳ್ಯಾವುವು ಕಡ್ಡಾಯವಾಗಿ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಲ್ಲ ಹಾಗೂ ಕೆಳ ನ್ಯಾಯಾಲಯದಲ್ಲಿ ವಿಚಾರಣೆಯಾಗುವಂತಹ ಅಪರಾಧಗಳಾಗಿರುತ್ತವೆ. ಅರ್ಜಿದಾರನಿಗೆ ಸೂಕ್ತ ಷರತ್ತುಗಳನ್ನು ವಿಧಿಸುವ ಮೂಲಕ ಅವರ ಹಾಜರಾತಿಯನ್ನು ತನಿಖಾ ಕಾಲದಲ್ಲಿ ಪಡೆಯಬಹುದಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ, ಅರ್ಜಿದಾರರನ್ನು ಷರತ್ತುಬದ್ಧ ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು ಎಂದು ಅಭಿಪ್ರಾಯಪಟ್ಟು, ಮೇಲಿನ ಅಂಶ ಒಂದನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

**12. ಅಂಶ (2):** ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ ರಾಮಕೃಷ್ಣ ಬಿನ್ ಕೆ.ವಿ. ನಾಗಪ್ಪ ಇವರ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಬಾಣಸವಾಡಿ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 04/2019 ರಲ್ಲಿ ಭಾರತ ದಂಡ ಸಂಹಿತೆ ಕಲಂ 419, 420, 467, 468, 504, 506(ಬಿ) ಮತ್ತು 120(ಬಿ)ರಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರನು 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ಬಾಣಸವಾಡಿ ಪೊಲೀಸ್ ಠಾಣೆಯ ಠಾಣಾಧಿಕಾರಿಗೆ ತೃಪ್ತಿಯಾಗುವಂತೆ ನೀಡತಕ್ಕದ್ದು,

2. ಅರ್ಜಿದಾರನು ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,

3. ಅರ್ಜಿದಾರನು ಈ ಆದೇಶವಾದ 6 ತಿಂಗಳವರೆಗೆ ಪ್ರತಿ 2 ನೇ ಮತ್ತು 4 ನೇ ಶನಿವಾರದಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5.00 ಗಂಟೆಯಲ್ಲಿ ಠಾಣಾ ಅಧಿಕಾರಿಯ ಮುಂದೆ ಹಾಜರಾಗತಕ್ಕದ್ದು ಮತ್ತು ತನಿಖೆಗೆ ಸಹಕರಿಸತಕ್ಕದ್ದು.

4. ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಹಾಗೂ ಅರ್ಜಿದಾರನು ತನ್ನ ವಾಸಸ್ಥಳವನ್ನು ಬದಲಾಯಿಸಬೇಕಾದಲ್ಲಿ ನ್ಯಾಯಾಲಯದ/ ತನಿಖಾಧಿಕಾರಿಯ ಅನುಮತಿ ಪಡೆಯತಕ್ಕದ್ದು,

5. ಅರ್ಜಿದಾರನು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿ ಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶ ಪಡಿಸಬಾರದು,

***(ಈ** ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ**,** ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ **29ನೇ ಮಾಹೆ ಜನವರಿ 2021**ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ**)***

ಶ್ರೀಮತಿ ಕೆ. ಜಿ. ಶಾಂತಿ
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋ ಹಾಲ್ ಘಟಕ, ಬೆಂಗಳೂರು ನಗರ.*

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ (ಪ್ರತ್ಯೇಕ ಆದೇಶದಂತೆ) ಘೋಷಿಸಲಾಗಿದೆ.

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ ರಾಮಕೃಷ್ಣ ಬಿನ್ ಕೆ.ವಿ. ನಾಗಪ್ಪ ಇವರ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಬಾಣಸವಾಡಿ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 04/2019 ರಲ್ಲಿ ಭಾರತ ದಂಡ ಸಂಹಿತೆ ಕಲಂ 419, 420, 467, 468, 504, 506(ಬಿ) ಮತ್ತು 120(ಬಿ)ರಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

**1.** ಅರ್ಜಿದಾರನು 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು

ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ಬಾಣಸವಾಡಿ ಪೊಲೀಸ್ ಠಾಣೆಯ ಠಾಣಾಧಿಕಾರಿಗೆ ತೃಪ್ತಿಯಾಗುವಂತೆ ನೀಡತಕ್ಕದ್ದು,

**2.** ಅರ್ಜಿದಾರನು ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,

**3.** ಅರ್ಜಿದಾರನು ಈ ಆದೇಶವಾದ 6 ತಿಂಗಳವರೆಗೆ ಪ್ರತಿ 2 ನೇ ಮತ್ತು 4 ನೇ ಶನಿವಾರದಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5.00 ಗಂಟೆಯಲ್ಲಿ ಠಾಣಾ ಅಧಿಕಾರಿಯ ಮುಂದೆ ಹಾಜರಾಗತಕ್ಕದ್ದು ಮತ್ತು ತನಿಖೆಗೆ ಸಹಕರಿಸತಕ್ಕದ್ದು.

**4.** ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಹಾಗೂ ಅರ್ಜಿದಾರನು ತನ್ನ ವಾಸಸ್ಥಳವನ್ನು

ಬದಲಾಯಿಸಬೇಕಾದಲ್ಲಿ ನ್ಯಾಯಾಲಯದ/ ತನಿಖಾಧಿಕಾರಿಯ ಅನುಮತಿ ಪಡೆಯತಕ್ಕದ್ದು,

**5.** ಅರ್ಜಿದಾರನು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿ ಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶ ಪಡಿಸಬಾರದು.

**57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,**
ಮೆಯೋಹಾಲ್ ಘಟಕ, ಬೆಂಗಳೂರು.